ಎರಡು ಕಡೆಯ ಹಿರಿಯರೂ ನಡೆದ 'ಮೋಸ'ದ ಕುರಿತು ವಾಗ್ವಾದ ನಡೆಸಿದರು. ಮೊದಲಿಗೆ ಗೌರಿ ಕಡೆಯವರು ಗಂಡಿನವರ ಕೈ ಕಾಲು ಹಿಡಿದು, ''ನಮ್ಮದು ತಪ್ಪು ಹೊಟ್ಟ್ಯಾಗ ಹಾಕ್ಕೊಂಡು ಕ್ಷಮಿಸಿ ಬಿಡ್ರಿ, ಗೌರಿ ಜೀವನ ಹಾಳು ಮಾಡಬೇಡ್ರೀ'' ಅಂತ ಕೇಳ್ಕೊಳ್ತಾ ಇದ್ದೋರು, ಯಾವಾಗ ಇವರು ತಮ್ಮ ಮಾತಿಗೆ ಜಗ್ಗೋದಿಲ್ಲ ಅಂತ ಗೊತ್ತಾಯ್ತೋ, ಒಮ್ಮೆಗೇ ರಾಗ ಬದಲಿಸಿ, ''ನಾವು ಹೇಳಿದಾಂಗೆ ಗೌರಿನ್ನ ನೀವು ಇಲ್ಲೆ ಇಟ್ಕೊಂಡ್ರಿ ಸರಿ. ಇಲ್ಲ ಅಂದ್ರ ನಿಮ್ಮ ಮೇಲೆ ಸೆಕ್ಶನ್ **498–A** ಜಡಿದು ವರದಕ್ಷಿಣೆ ಕೇಸು ಹಾಕಿ ಕೋರ್ಟ್ ಕಚೇರಿ ತಿರುಗಾಡೊ ಹಾಂಗೆ ಮಾಡ್ತೀನಿ, ಹುಷಾರ್!'' ಅಂತ ಧಮಕಿ ಹಾಕಿ ತಮ್ಮ ಬಳಗವನ್ನು ಕರೆದುಕೊಂಡು ತೆರಳಿದರು.

ಇದೆಲ್ಲದರ ನಡುವೆ ಯಾರೊಬ್ಬರೂ ಎಚ್ಚೆತ್ತುಕೊಂಡು ಸಿದ್ಲಿಂಗನನ್ನು ಹುಡುಕಿ ತರುವ ಯೋಚನೆಯನ್ನೇ ಮಾಡದಿದ್ದುದೇ ಚೋದ್ಯ.

★★★

